# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ , ಮೈಸೂರು

| | |
|---|---|
| ಎಸ್. ಸಿ. | 34/2018 |

| | | | | |
|---|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಮಹೇಶ | | **ಪ್ರಮಾಣ ಮಾಡಿಸಿದ ದಿನಾಂಕ** | |
| **ತಂದೆ ಹೆಸರು** | ಃ ಶ್ರೀ ಮಹದೇವಪ್ಪ | | **17.02.2021** | |
| **ವಯಸ್ಸು** | ಃ 47 | **ವರ್ಷ** | | |
| **ವೃತ್ತಿ** | ಃ ಕೂಲಿ ಕೆಲಸ | | **PW:** | 21 |
| **ವಾಸಸ್ಥಳ** | ಃ **ಬಂಡಿಪಾಳ್ಯ, ಮೈಸೂರು** | | **CW:** | 13 |

**ಮುಖ್ಯ ವಿಚಾರಣೆಃ- ಸರ್ಕಾರಿ ಅಭಿಯೋಜಕರಿಂದಃ-**

. ನಾನು 2015 ರಿಂದ 2016 ನೇ ಸಾಲಿನಲ್ಲಿ ಇಂಡಿಯನ್ ಬ್ಯಾಂಕ್, ಉದಯಗಿರಿ, ಎಂ.ಜಿ. ರಸ್ತೆ, ಎಟಿಎಂ ನಲ್ಲಿ ಸೆಕ್ಯೂರಿಟಿಯಾಗಿ ಕೆಲಸ ಮಾಡುತ್ತಿದ್ದೆ. ಬೆಳಗ್ಗೆ 6.30 ರಿಂದ ರಾತ್ರಿ 9.30 ರ ತನಕ ಕೆಲಸದ ಅವಧಿ ಇತ್ತು.

ದಿನಾಂಕಃ 13.03.2016 ರಂದು ಸಂಜೆ 5.00 ರ ವೇಳೆಗೆ ನಾನು ಎಟಿಎಂ ಹೊರಗಡೆ ಕುಳಿತಿರುವಾಗ ಟಿವಿಎಸ್ ವಿಕ್ಟರ್ ದ್ವಿಚಕ್ರ ವಾಹನದಲ್ಲಿ ಇಬ್ಬರು ವ್ಯಕ್ತಿಗಳು ಬಂದು ಆಟೋ ಮೊಬೈಲ್ ಅಂಗಡಿಯ ಮುಂದೆ ನಿಲ್ಲಿಸಿದರು. ಎಟಿಎಂನಿಂದ ಆಟೋ ಮೊಬೈಲ್ ಅಂಗಡಿಗೆ 30 ಅಡಿ ಅಂತರ ಇದೆ. ಬೈಕ್ ನ ಹಿಂದೆ ಕುಳಿತಿದ್ದ ವ್ಯಕ್ತಿ ಇಳಿದು ತನ್ನ ಜರ್ಕಿನ್ ಒಳಗೆ ಇದ್ದ ಮಚ್ಚನ್ನು ಹೊರಗೆ ಎಳೆದು ಹಿಡಿದುಕೊಂಡು ವಿನಾಯಕ ಟೀ ಸ್ಟಾಲ್ ಅಂಗಡಿ ಕಡೆಗೆ ಹೋಗಿದ್ದು, ಸದರಿ ಟೀ ಸ್ಟಾಲ್‌ನಲ್ಲಿ ಒಬ್ಬ ವ್ಯಕ್ತಿ ಪೇಪರನ್ನು ಓದುತ್ತಾ ಕುಳಿತಿದ್ದರು. ಎಟಿಎಂನಿಂದ ವಿನಾಯಕ ಟೀ ಸ್ಟಾಲ್ 50 ರಿಂದ 60 ಅಡಿ ಅಂತರ ಇದೆ. ಪೇಪರ್ ಓದುತ್ತಿದ್ದ ವ್ಯಕ್ತಿಯ ಎಡಿ ಕಿವಿಯ ಹತ್ತಿರ ಮತ್ತು ಬೆನ್ನಿಗೆ ಮಚ್ಚಿನಿಂದ ಬಲವಾಗಿ ಹಲ್ಲೆ ಮಾಡಿದ ಪರಿಣಾಮ ಸದರಿ ವ್ಯಕ್ತಿ ನೆಲಕ್ಕೆ ಬಿದ್ದಿದ್ದರು. ಸದರಿ ವ್ಯಕ್ತಿ ಮಚ್ಚಿಗೆ ತಾಗಿದ ರಕ್ತವನ್ನು ಅಲಾಡಿಸಿಕೊಂಡು ನಲೆಕ್ಕೆ ಬೀಳಿಸಿ ಹೋದ ದಾರಿಯಲ್ಲಿ ವಾಪಸ್ಸು ಬರುವಾಗ ನನ್ನನ್ನು ನೋಡಿ ಗುರಾಯಿಸಿಕೊಂಡು ಬಂದು ಬೈಕ್‌ನ ಹಿಂಬದಿ ಕುಳಿತುಕೊಂಡಿದ್ದು ಬೈಕ್ ಸವಾರ ಬೈಕನ್ನು

ಆನ್ ಮಾಡಿಕೊಂಡಿದ್ದು ಹೆಲ್ಮೆಟನ್ನು ಧರಿಸಿದ್ದರು. ಸದರಿ ಇಬ್ಬರೂ ವ್ಯಕ್ತಿಗಳು ಬೈಕಿನಲ್ಲಿ ಮಣ್ಣಿನ ರಸ್ತೆಯಲ್ಲಿ ಹೊರಟು ಹೋಗಿದ್ದಾರೆ. ಮಚ್ಚಿನಿಂದ ಹಲ್ಲೆ ಮಾಡಿದ ವ್ಯಕ್ತಿಯ ವಯಸ್ಸು ಅಂದಾಜು 30 ರಿಂದ 35 ಬೈಕ್ ಚಾಲನೆ ಮಾಡುತ್ತಿದ್ದ ವ್ಯಕ್ತಿಯ ವಯಸ್ಸು ಅಂದಾಜು 20 ರಿಂದ 25 ವರ್ಷ ಇದೆ.

ಟೀ ಸ್ಟಾಲ್ ಮಾಲೀಕರು ಕೂಗಿಕೊಂಡಿದ್ದು ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಹಲ್ಲೆಗೆ ಒಳಪಟ್ಟ ವ್ಯಕ್ತಿ ನೆಲದಲ್ಲಿ ಬಿದ್ದು ಒದ್ದಾಡುತ್ತಿದ್ದು ಅದೇ ವೇಳೆಗೆ 5-6 ಜನ ಸ್ಥಳಕ್ಕೆ ಬಂದಿದ್ದು, ಸಂಚಾರಿ ಪೊಲೀಸರು ಸಹ ಸ್ಥಳಕ್ಕೆ ಬಂದಿದ್ದು, ಗಾಯಾಳುವನ್ನು ಆಟೋದಲ್ಲಿ ಕೆ ಆರ್ ಆಸ್ಪತ್ರೆ, ಮೈಸೂರಿಗೆ ಕರೆದುಕೊಂಡು ಹೋಗಿದ್ದಾರೆ. ಸದರಿ ಗಾಯಾಳು ಆರ್. ಎಸ್. ಎಸ್. ಸಂಘಟನಕಾರ ರಾಜು ಎಂದು ತಿಳಿಯಿತು. ರಾತ್ರಿ 8.00 ರಿಂದ 8.30 ರ ವೇಳೆಯಲ್ಲಿ ಕೆ ಆರ್ ಆಸ್ಪತ್ರೆಯಲ್ಲಿ ರಾಜು ಮೃತಪಟ್ಟ ಬಗ್ಗೆ ತಿಳಿಯಿತು. ಮರುದಿನ ನಾನು ಕರ್ತವ್ಯಕ್ಕೆ ಹಾಜರು ಆದಾಗ ತನಿಖಾಧಿಕಾರಿ ನನ್ನನ್ನು ಉದಯಗಿರಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದು ನಾನು ನಡೆದ ಮತ್ತು ನೋಡಿದ ಘಟನೆಯ ಬಗ್ಗೆ ಹೇಳಿಕೆ ಕೊಟ್ಟಿದ್ದೇನೆ.

*6* ತಿಂಗಳ ನಂತರ ಪೊಲೀಸ್ ಅಧಿಕಾರಿ ನನಗೆ ನೋಟಿಸ್ಸು ನೀಡಿ ಮೈಸೂರು ಜೈಲಿಗೆ ಬರುವಂತೆ ತಿಳಿಸಿದ್ದರು. ಅದೇ ಪ್ರಕಾರ ನಾನು ಮೈಸೂರು ಜೈಲಿಗೆ ಹೋದಾಗ ತಹಶೀಲ್ದಾರ ಅವರು ನನ್ನ ಹೆಸರು, ವಿಳಾಸ ಮತ್ತು ವಿವರಗಳನ್ನು ಪಡೆದು ರಾಜುವನ್ನು ಕೊಲೆ ಮಾಡಿದ ವ್ಯಕ್ತಿಯನ್ನು ಗುರುತಿಸುವ ಬಗ್ಗೆ ನನಗೆ ಹೇಳಿದ್ದರು. ನನ್ನನ್ನು ಸ್ಥಳದಿಂದ ಹೊರಗೆ ನಿಲ್ಲಿಸಿ ಸುಮಾರು *10* ಜನರನ್ನು ಜೈಲಿನ ಮೈದಾನದಲ್ಲಿ ಸಾಲಾಗಿ ನಿಲ್ಲಿಸಿ, ನನ್ನನ್ನು ಕರೆಯಿಸಿ ಗುರುತಿಸುವಂತೆ ಹೇಳಿದ ಮೇರೆಗೆ ನಾನು ನನ್ನ ಎಡಭಾಗದಲ್ಲಿ ಇದ್ದ *1* ನೇ ವ್ಯಕ್ತಿಯನ್ನು ಗುರುತಿಸಿದ್ದೇನೆ. ಇದೇ ಪ್ರಕಾರ *2* ನೇ ಸಲ ಮಾಡಿದಾಗ ಸದರಿ ವ್ಯಕ್ತಿಯನ್ನು ನಾನು *6* ನೇ ಸ್ಥಾನದಲ್ಲಿ ಗುರುತಿಸಿದ್ದೇನೆ. ಇದೇ ಪ್ರಕಾರ *3* ನೇ ಸಲ ಮಾಡಿದಾಗ ನಾನು ಸದರಿ ವ್ಯಕ್ತಿಯನ್ನು *8* ನೇ ಸ್ಥಾನದಲ್ಲಿ ಗುರುತಿಸಿದ್ದೇನೆ. ಸ್ಥಳದಲ್ಲಿ ತಹಶೀಲ್ದಾರ ಅವರು ದಾಖಲೆಗೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಇದನ್ನು ಈಗಾಗಲೇ ನಿ.ಪಿ.*-3(ಡಿ)* ರಂತೆ ಗುರುತಿಸಲಾಗಿದೆ.

ನ್ಯಾಯಾಲಯದಲ್ಲಿ ಹಾಜರು ಇರುವ *1* ನೇ ಆರೋಪಿಯನ್ನು ನೋಡಿ ಗುರುತಿಸಿದ್ದೇನೆ. ನಾನು ಎಟಿಎಂನಲ್ಲಿ ಕರ್ತವ್ಯದಲ್ಲಿ ಇದ್ದಾಗ *1* ನೇ ಆರೋಪಿ ನನ್ನನ್ನು ನೋಡಿ ಗುರಾಯಿಸಿಕೊಂಡು

ಹೋಗಿದ್ದರು. ಅಂದು *1* ನೇ ಆರೋಪಿಯ ಕೈಯಲ್ಲಿ ಇದ್ದ ಮಚ್ಚನ್ನು ನೋಡಿದರೆ ಗುರುತಿಸುತ್ತೇನೆ. ಇದನ್ನು ಈಗಾಗಲೇ ಮು.ಮಾ.*3* ರಂತೆ ಗುರುತಿಸಲಾಗಿದೆ. ಅಂದು *1* ನೇ ಆರೋಪಿ ಧರಿಸಿದ್ದ ಜರ್ಕಿನನ್ನು ನಾನು ನೋಡಿ ಗುರುತಿಸಿದ್ದು ಇದನ್ನು ಈಗಾಗಲೇ ಮು.ಮಾ.*5* ರಂತೆ ಗುರುತಿಸಲಾಗಿದೆ. ಅಂದು ಬೈಕನ್ನು ಚಾಲನೆ ಮಾಡುತ್ತಿದ್ದ ವ್ಯಕ್ತಿ *2* ನೇ ಆರೋಪಿ ಇರಬಹುದು.

**ಪಾಟೀ ಸವಾಲುಃ ಎಲ್ಲಾ ಆರೋಪಿಗಳ ಪರ ಶ್ರೀ ಎಂ.ಎ. ವಕೀಲರಿಂದಃ-**

._ ನಾನು ಮೇ 2016 ನೇ ಸಾಲಿನಲ್ಲಿ ನಾನು ಎಟಿಎಂ ಸೆಕ್ಯೂರಿಟಿ ಕೆಲಸ ಬಿಟ್ಟಿದ್ದೇನೆ. ಎಟಿಎಂ ಪಕ್ಕದಲ್ಲಿ ಇಂಡಿಯನ್ ಬ್ಯಾಂಕ್ ಇರಲಿಲ್ಲ. ಎಟಿಎಂ ಮಾತ್ರ ಇತ್ತು. ರಾತ್ರಿ 9.30 ರ ವೇಳೆಗೆ ಎಟಿಎಂಗೆ ಬೀಗ ಹಾಕಿಕೊಂಡು ಹೋಗಲಾಗುತ್ತದೆ. ನಾನು ಕರ್ತವ್ಯ ಮಾಡುತ್ತಿದ್ದ ಅವಧಿಯಲ್ಲಿ ಬೇರೆ ಸೆಕ್ಯೂರಿಟಿ ಗಾರ್ಡ ಇರಲಿಲ್ಲ. ನಾನು ಡಬಲ್ ಡ್ಯೂಟಿ ಮಾಡುತ್ತಿದ್ದೆ. ನಾನು ಎಟಿಎಂ ಹೊರಗಡೆ ಕುಳಿತಿದ್ದೆ. ಎಟಿಎಂ ಮತ್ತು ವಿನಾಯಕ ಟೀ ಸ್ಟಾಲ್ ನಡುವೆ ರಸ್ತೆ ಇದೆ ಎಂದರೆ ಸರಿ. ಭಾನುವಾರ ಇದ್ದ ಕಾರಣ ರಸ್ತೆಯಲ್ಲಿ ಕಡಿಮೆ ಸಂಖ್ಯೆಯಲ್ಲಿ ವಾಹನ ಸಂಚಾರ ಇತ್ತು. ಆಟೋ ಮೊಬೈಲ್ ಶಾಪ್ ಓಪನ್ ಇರಲಿಲ್ಲ. ವಿನಾಯಕ ಟೀ ಸ್ಟಾಲ್‌ನಲ್ಲಿ ಸಂಜೆ 5.30 ರ ವೇಳೆಯಲ್ಲಿ ಇಬ್ಬರು ಗ್ರಾಹಕರು ಮಾತ್ರ ಇದ್ದರು. ಬೆಳಗ್ಗೆ 6.30 ರಿಂದ 5.30 ರ ತನಕ ವಿನಾಯಕ ಟೀ ಸ್ಟಾಲ್ ಗೆ ಅಂದಾಜು 30 ರಿಂದ 50 ಗ್ರಾಹಕರು ಬಂದು ಹೋಗಿರಬಹುದು. ಅಂದು ನಾನು ವಿನಾಯಕ ಟೀ ಸ್ಟಾಲ್‌ನಲ್ಲಿ ಟೀ ಕುಡಿಯಲು ಹೋಗಿಲ್ಲ.

ನನ್ನ ಕೆಲಸದ ಅವಧಿಯಲ್ಲಿ ಎಟಿಎಂನಲ್ಲಿ ನನಗೆ ಮೀಸಲಾದ ಸ್ಥಳವನ್ನು ಬಿಟ್ಟು ಹೋಗುವಂತೆ ಇಲ್ಲ ಎಂದರೆ ಸರಿ. ದಿನಾಂಕಃ 14.03.2016 ರಂದು ಬೆಳಗ್ಗೆ 10.30 ರಿಂದ 11.00 ರ ವೇಳೆಗೆ ನಾನು ಪೊಲೀಸ್ ಠಾಣೆಗೆ ಹೋಗಿದ್ದೇನೆ. ಸುಮಾರು ಅರ್ಧ ಗಂಟೆ ಅವಧಿಗೆ ನಾನು ಪೊಲೀಸ್ ಠಾಣೆಯಲ್ಲಿ ಇದ್ದೆ. ನನ್ನ ಹೇಳಿಕೆಯನ್ನು ಇನ್ಸಪೆಕ್ಟರ್ ಅವರು ಬರೆದಿದ್ದಾರೆ. ದಿನಾಂಕಃ 13.03.2016 ರಂದು ರಾತ್ರಿ 9.00 ರಿಂದ ಮುಂದಿನ 4 ದಿನಗಳ ಕಾಲ ಎಟಿಎಂ ಸೇರಿದಂತೆ ಇತರೆ ಅಂಗಡಿ ಮುಂಗಟ್ಟುಗಳನ್ನು ಪೊಲೀಸರು ಮುಚ್ಚಿಸಿದ್ದರು. ದಿನಾಂಕಃ 14.03.2016 ರಂದು ಎಟಿಎಂನನ್ನು ತೆಗೆದಿಲ್ಲ. ಅಂದು ಪೊಲೀಸರು ನನ್ನನ್ನು ತಮ್ಮ ಜೊತೆ ಬ್ಯಾಂಕಿನಿಂದ ಕರೆದುಕೊಂಡು ಹೋಗಿದ್ದಾರೆ. ಎಟಿಎಂ ನಿಂದ 30 ಅಡಿ ಅಂತರದಲ್ಲಿ ಆಟೋ ಮೊಬೈಲ್

ಅಂಗಡಿ ಇರುವ ಬಗ್ಗೆ ನಾನು ಹೇಳಿಕೆ ಕಾಲದಲ್ಲಿ ಹೇಳಿದ್ದೇನೆ. ಎಡಗಡೆ ಕಿವಿಯ ಹತ್ತಿರ ಹಲ್ಲೆ ಮಾಡಿದ ಬಗ್ಗೆ ನಾನು ಹೇಳಿಕೆ ಕೊಟಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ನನ್ನನ್ನು ಗುರುಯಿಸಿಕೊಂಡು ಹೋದ ಬಗ್ಗೆ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮೇ-2016 ರಿಂದ ಸಿದ್ದಾರ್ಥ ಲೇಔಟ್, ಇಂಡಿಯನ್ ಬ್ಯಾಂಕ್ ಎಟಿಎಂನಲ್ಲಿ ಸೆಕ್ಯೂರಿಟಿ ಗಾರ್ಡ ಕೆಲಸ ಮಾಡಿದ್ದೇನೆ. ಈ ಬಗ್ಗೆ ತನಿಖಾಧಿಕಾರಿಗೆ ಮಾಹಿತಿ ಕೊಟ್ಟಿಲ್ಲ. 6 ತಿಂಗಳ ಉದಯಗಿರಿ ಪೊಲೀಸರು ನನ್ನ ಮನೆಗೆ ಬಂದು ಬೆಳಗ್ಗೆ 10.30 ರಿಂದ 12.00 ರ ಅವಧಿಯಲ್ಲಿ ನೋಟಿಸ್ಸು ಕೊಟ್ಟಿದ್ದರು. ನೋಟಿಸ್ಸು ಪಡೆದ ಮರುದಿನ ನಾನು ಮೈಸೂರು ಜೈಲಿಗೆ ಹೋಗಿದ್ದೇನೆ. ಸಿದ್ದಾರ್ಥ ಲೇಔಟ್, ಇಂಡಿಯನ್ ಬ್ಯಾಂಕ್ ಎಟಿಎಂನಲ್ಲಿ ಸೆಕ್ಯೂರಿಟಿ ಗಾರ್ಡ ಆಗಿ ರಾತ್ರಿ ಪಾಳಿ ಕೆಲಸ ಮಾಡುತ್ತಿದ್ದೆ. ನಾನು ಮೈಸೂರು ಜೈಲಿನ ಬಳಿ ಹೋದಾಗ ಮಧಾಹ್ನ 3.00 ರಿಂದ 4.00 ಗಂಟೆ ಆಗಿತ್ತು. ನಾನು ಜೈಲಿನಲ್ಲಿ ಸುಮಾರು ಅರ್ಧ ಮುಕ್ಕಾಲು ಗಂಟೆ ಇದ್ದೆ. ಅಂದು ಸಾಲಿನಲ್ಲಿ ನಿಲ್ಲಿಸಿದ್ದ 10 ಜನ ವ್ಯಕ್ತಿಗಳಿಗೆ ಗಡ್ಡ ಮತ್ತು ಮೀಸೆ ಇದ್ದು ಐದೂವರೆ ಅಡಿ ಎತ್ತರ ಇದ್ದರು. ಜಾತಿಯ ಬಗ್ಗೆ ಹೇಳಲು ಬರುವುದಿಲ್ಲ. ಇತರೆ ಜಾತಿಯ ವ್ಯಕ್ತಿಗಳಿಗೆ ಹೋಲಿಸಿದ್ದಲ್ಲಿ ಮುಸ್ಲಿಂ ಜನಾಂಗದ ವ್ಯಕ್ತಿಗಳು ಗೊತ್ತಾಗುತ್ತದೆ.

ಅಂದು ಸಾಲಿನಲ್ಲಿ ನಿಲ್ಲಿಸಿದ್ದ 10 ವ್ಯಕ್ತಿಗಳ ಪೈಕಿ 9 ವ್ಯಕ್ತಿಗಳು ಬೇರೆ ಜನಾಂಗಕ್ಕೆ ಮತ್ತು ಒಬ್ಬ ವ್ಯಕ್ತಿ ಮಾತ್ರ ಮುಸ್ಲಿಂ ಜನಾಂಗಕ್ಕೆ ಸೇರಿದ್ದರು ಎಂದು ಹೇಳಲು ಬರುವುದಿಲ್ಲ. ದಿನಾಂಕಃ 14.03.2016 ರಂದು ನಾನು ನೀಡಿದ ಹೇಳಿಕೆಗೆ ಸಹಿ ಮಾಡಿಲ್ಲ. ದಿನಾಂಕಃ 13.03.2016 ರಂದು ಅರ್ಧ ಗಂಟೆಗೆ ಒಮ್ಮೆ ಅಥವಾ ಗಂಟೆಗೆ ಒಮ್ಮೆ ಕೆಲವರು ಎಟಿಎಂಗೆ ಬಂದು ಹೋಗಿದ್ದಾರೆ. ಇಂದು ನ್ಯಾಯಾಲಯಕ್ಕೆ ನಾನು ಸ್ವತಃ ಬಂದಿದ್ದೇನೆ. 1 ನೇ ಆರೋಪಿಯನ್ನು ಗುರುತಿಸಿದ ಬಗ್ಗೆ 1 ನೇ ಸ್ಥಾನದಲ್ಲಿ, 6 ನೇ ಸ್ಥಾನದಲ್ಲಿ ಮತ್ತು 8 ನೇ ಸ್ಥಾನದಲ್ಲಿ ಇದ್ದ ಬಗ್ಗೆ ಪೊಲೀಸರು ನನಗೆ ಹೇಳಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನಗೆ ನೋಟಿಸ್ಸು ಕೊಡುವ ಕಾಲದಲ್ಲಿ ಮುಸ್ಲಿಂ ಜನಾಂಗದ ವ್ಯಕ್ತಿ ಕೊಲೆ ಮಾಡಿದ ಬಗ್ಗೆ ತಿಳಿದ ಮೇರೆಗೆ ನಾನು 10 ವ್ಯಕ್ತಿಗಳ ಪೈಕಿ 1 ನೇ ಆರೋಪಿ ಮುಸ್ಲಿಂ ವ್ಯಕ್ತಿಯನ್ನು ಗುರುತಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನಿ.ಪಿ.-3(ಡಿ) ನಂತೆ ತಹಶೀಲ್ದಾರರ ಕಛೇರಿಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಘಟನೆ ಆದ 6 ತಿಂಗಳ ನಂತರ ನಾನು ಹೇಳಿದಂತೆ ಜೈಲಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ಮು.ಮಾ.-3 ರಂತೆ ಮಚ್ಚು ಮಾರುಕಟ್ಟೆಯಲ್ಲಿ ಸಾಕಷ್ಟು ಸಿಗುತ್ತದೆ ಎಂದರೆ ಸರಿ. ಅಂದು ಘಟನೆ ಕಾಲದಲ್ಲಿ ನೋಡಿದ ಕಾರಣ ನಾನು ಮು.ಮಾ.-3 ರಂತೆ ಮಚ್ಚನ್ನು ಗುರುತಿಸಿದ್ದೇನೆ. ಮಚ್ಚನ್ನು ಗುರುತಿಸುವ ಬಗ್ಗೆ ವಿಶೇಷ ಗುರುತು ಇಲ್ಲ. ಪೊಲೀಸರು ತೋರಿಸಿದ ಕಾರಣ ನಾನು 1 ನೇ ಆರೋಪಿಯನ್ನು ಗುರುತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 13.03.2016 ರಂದು ನಾನು ಕರ್ತವ್ಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಕರ್ತವ್ಯದಲ್ಲಿ ಇದ್ದ ಬಗ್ಗೆ ದಾಖಲೆಯನ್ನು ತನಿಖಾಧಿಕಾರಿಗೆ ಕೊಟ್ಟಿಲ್ಲ. ಅಂದು ನಾನು ಕೆಲಸದಲ್ಲಿ ಇರಲಿಲ್ಲ, ಘಟನೆಯನ್ನು ಮತ್ತು ಹಲ್ಲೆ ಮಾಡಿದ ವ್ಯಕ್ತಿಗಳನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ ಎ ಒ.,**

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,**
**ಮೈಸೂರು.**